# ರಾಮಕೃಷ್ಣ ಮಠ - ಯೋಗೋದ್ಯಾನ : ಒಂದು ಪರಿಚಯ

❑ ಬ್ರ. ಅಭಯ ಚೈತನ್ಯ

**ಭಗವಾನ್ ಶ್ರೀರಾಮಕೃಷ್ಣರೇ 'ಯೋಗೋದ್ಯಾನ' ಎಂದು ಹೆಸರಿಸಿದ ಈ ಪವಿತ್ರಸ್ಥಳ ಕೊಲ್ಕತಾದ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಒಂದು ಪ್ರಮುಖ ಆಧ್ಯಾತ್ಮಿಕ ಕೇಂದ್ರವಾಗಿ ಬೆಳೆದು ಬಂದಿರುವುದರ ಸಂಕ್ಷಿಪ್ತ ಪರಿಚಯವನ್ನು ಮಾಡಿ ಕೊಟ್ಟಿರುವ ಬ್ರ.ಅಭಯ ಚೈತನ್ಯ ಅವರು ಮೈಸೂರಿನ ಪ್ರತಿಷ್ಠಿತ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವಾನಿರತರಾಗಿದ್ದಾರೆ.**

### ಕೂಗಿ ಭಜನೆ ಮಾಡಲೊಂದು ಸ್ಥಳ

ಶ್ರೀರಾಮಕೃಷ್ಣರ ಗೃಹೀಭಕ್ತರ ಪೈಕಿ ಅವರ ಅಸೀಮ ಕೃಪೆಗೆ ಪಾತ್ರರಾದವರಲ್ಲೊಬ್ಬನೆಂದರೆ ರಾಮಚಂದ್ರದತ್ತ. ಈತ ನರೇಂದ್ರ ನಾಥದತ್ತನ (ಸ್ವಾಮಿ ವಿವೇಕಾನಂದರ ಹಿಂದಿನ ಹೆಸರು) ಸಂಬಂಧಿ. ವೃತ್ತಿಯಲ್ಲಿ ಕೊಲ್ಕತಾ ವೈದ್ಯಕೀಯ ಕಾಲೇಜಿನ ಪ್ರಖ್ಯಾತ ರಾಸಾಯನಿಕ ತಜ್ಞ (ಆತ ಕಂಡುಹಿಡಿದ 'ಕುರ್ಚಿಸಿನ್' ಔಷಧಿ ದೇಶ-ವಿದೇಶಗಳಲ್ಲಿ ಹೆಸರುಗಳಿಸಿತ್ತು). ಶ್ರೀರಾಮಕೃಷ್ಣರ ಭಾವ ಪ್ರಚಾರ ಕಾರ್ಯದಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿ ಕೊಂಡಿದ್ದ ಈತ, ತನ್ನ ಇತರ ಭಕ್ತಸಂಗಿಗಳ ಜೊತೆ ಖೋಲ್, ಕರತಾಳಗಳನ್ನು ಬಾರಿಸುತ್ತ ರಾತ್ರಿ ಬಹಳ ಹೊತ್ತಿನವರೆಗೂ ಭಜನೆ ಯನ್ನು ಮಾಡುತ್ತಿದ್ದ. ಶ್ರೀರಾಮಕೃಷ್ಣರ ಉಪದೇಶಗಳನ್ನು ಪ್ರಾಮಾಣಿಕವಾಗಿ ಪಾಲಿಸಲು ಪ್ರಯತ್ನಿಸುತ್ತಿದ್ದ ರಾಮಚಂದ್ರನ ಭಜನೆಯ ಗುಂಪು ತಮ್ಮ ಗಂಟಲಿನ ಧ್ವನಿಪೆಟ್ಟಿಗೆಯ ಗರಿಷ್ಠ ಉಪಯೋಗವನ್ನು ಪಡೆಯುತ್ತಿತ್ತು! ರಾಮಚಂದ್ರ ಖ್ಯಾತ ವ್ಯಕ್ತಿ ಯಾದ್ದರಿಂದ ಮೊದಲು ಇವನ ನೆರೆಹೊರೆಯವರು ಇವರುಗಳ 'ತಾರಕ ಭಕ್ತಿ'ಗೆ ನಿದ್ದೆಗೆಟ್ಟರಾದರೂ ತಮ್ಮ ಅಸಹನೆಯನ್ನು ವ್ಯಕ್ತ ಪಡಿಸಲು ಹಿಂಜರಿದರು. ಕೆಲವರು ತಮಗಾಗುತ್ತಿದ್ದ ಕಷ್ಟವನ್ನು ವಿನೀತರಾಗಿ ಅವನಿಗೆ ತಿಳಿಸಿಯೂ ಇದ್ದರು. ಅದರಿಂದ ಪ್ರಯೋಜನ ವಾಗದಿರಲು ಬರಬರುತ್ತ ವ್ಯಗ್ರವಾಗಿಯೇ ಅವರ 'ಕೂಗಾಟ'ಗಳನ್ನು ನಿಲ್ಲಿಸುವಂತೆ ಬೆದರಿಕೆ ಹಾಕಿದರು. ಇದರಿಂದಲೂ ಏನೂ ಪ್ರಯೋಜನವಾಗಲಿಲ್ಲ.

ಶ್ರೀರಾಮಕೃಷ್ಣರು ಆಗಾಗ ರಾಮಚಂದ್ರನ ಮನೆಗೆ ಉತ್ಸವಾದಿ ಗಳಲ್ಲಿ ಪಾಲ್ಗೊಳ್ಳಲು ಆಮಂತ್ರಿತರಾಗಿ ಬರುತ್ತಿದ್ದರು. ಹೀಗೊಮ್ಮೆ ಅವರು ಅಲ್ಲಿಗೆ ಹೋಗಲು, ರಾಮಚಂದ್ರನ ಒಬ್ಬ ನೆರೆಮನೆಯವ ಶ್ರೀರಾಮಕೃಷ್ಣರಿಗೆ ತಮ್ಮ ಕಷ್ಟವನ್ನು ಹೇಳಿಕೊಂಡ. ಶ್ರೀರಾಮ ಕೃಷ್ಣರು ರಾಮಚಂದ್ರನಿಗೆ ಮೆಲುದನಿಯಲ್ಲಿ ಕೀರ್ತನೆ ಮಾಡಲು ಆದೇಶಿಸಿದರು. ಗುರುವಿನಾಣತಿಯಂತೆ ರಾಮಚಂದ್ರ ಮತ್ತವನ ಸಂಗಡಿಗರು ಮೆಲುದನಿಯಲ್ಲೇ ಕೀರ್ತನೆಗಳನ್ನು ನಡೆಸುತ್ತಿದ್ದರು. ಆದರೆ ಈ ರೀತಿಯ ಭಜನೆಯಿಂದ ಅವರ ಮನಸ್ಸು ಭಕ್ತಿಯಿಂದ ಮತ್ತವಾಗುವುದಿರಲಿ, ಉಸಿರುಕಟ್ಟಿ ಹೋಗುತ್ತಿರುವ ಅನುಭವವಾಗ ತೊಡಗಿತು ಅವರಿಗೆ. ಒಮ್ಮೆ ರಾಮಚಂದ್ರ, ಶ್ರೀರಾಮಕೃಷ್ಣರ ಬಳಿ ಹೋಗಿ "ತಾವು ಅನುಮತಿ ನೀಡಿದರೆ ನಾವು ಒಂದು ನಿರ್ಜನ ಪ್ರದೇಶಕ್ಕೆ ಹೋಗಿ ಭಜನೆ ಕೀರ್ತನೆಗಳನ್ನು ಮಾಡಲು ಪ್ರಯತ್ನಿಸು ತ್ತೇವೆ," ಎಂದು ವಿನಂತಿಸಿಕೊಂಡ. "ಒಳ್ಳೇದು, ಒಳ್ಳೇದು. ಎಲ್ಲಿ ಒಂದು ನೂರು ಕೊಲೆಗಳು ನಡೆದರೂ ಜನರಿಗೆ ಗೊತ್ತಾಗುವುದೇ ಇಲ್ಲವೋ, ಅಂತಹ ಒಂದು ಜಾಗ ಆರಿಸಿಕೊಳ್ಳಿ" ಎಂದರು ಶ್ರೀರಾಮಕೃಷ್ಣರು.



ಭಕ್ತ ರಾಮಚಂದ್ರದತ್ತ

ಗುರುವಿನ ಅನುಮತಿಯನ್ನು ಸಂತೋಷದಿಂದ ತಲೆಯಲ್ಲಿ ಹೊತ್ತು ಹೊರಟ ರಾಮಚಂದ್ರದತ್ತನಿಗೆ ಕೊನೆಗೂ ಒಂದು ಎಕರೆ ಜಾಗ ಪ್ರಾಪ್ತವಾಯಿತು. ೧೮೮೩ ಅಕ್ಟೋಬರ್ ಇರಂದು ಎಂಟು ನೂರು ರೂಪಾಯಿಗಳಿಗೆ ಜಾಗವನ್ನು ಅದರ ಮಾಲೀಕನಾದ ಮಹಮ್ಮದ್ ಅಬ್ಬುಸ್ ವಹಾಬ್‌ನಿಂದ ಖರೀದಿಸಲಾಯಿತು. ಖರೀದಿ ಮಾಡಲು ರಾಮಚಂದ್ರನಿಗೆ ಹಣಸಹಾಯ ಒದಗಿಸಿ ಕೊಟ್ಟದ್ದು ಅವನ ಚಿಕ್ಕಮ್ಮನ ಮಗನಾದ ನಿತ್ಯಗೋಪಾಲ (ಶ್ರೀರಾಮಕೃಷ್ಣರ ಭಕ್ತ). ಕರಾರುಪತ್ರ ರಾಮಚಂದ್ರನ ಹೆಸರಿ ನಲ್ಲಿತ್ತು. ಆದರೆ ರಾಮಚಂದ್ರ ಇದಕ್ಕೆ ಒಪ್ಪಲಿಲ್ಲ. ನಿತ್ಯಗೋಪಾಲ "ಇಲ್ಲ, ಇಲ್ಲ, ಇದರಲ್ಲಿ ಒಂದು ರಹಸ್ಯ ಅಡಗಿದೆ. ಮುಂದೊಮ್ಮೆ ನಿನಗಿದು ತಿಳಿಯುತ್ತದೆ" ಎಂದು ರಾಮಚಂದ್ರನಿಗೆ ಸಮಾಧಾನ ಹೇಳಿದ.


### ಇಷ್ಟದೈವದ ಅನುಗ್ರಹ

ಜಮೀನು ಖರೀದಿಸಿದ ರಾಮಚಂದ್ರ, ಈಗ ಅಲ್ಲೊಬ್ಬ ಕೆಲಸಗಾರನನ್ನಿಟ್ಟು, ತರಕಾರಿ ಬೆಳೆಸತೊಡಗಿದ. ಶ್ರೀರಾಮಕೃಷ್ಣರಿಗೆ ಈತ ಜಮೀನು ಖರೀದಿಸಿರುವ ವಿಷಯ ತಿಳಿದುಬಂತು. ಕೆಲವು ದಿನಗಳು ಕಳೆದ ಮೇಲೆ ರಾಮಚಂದ್ರನನ್ನು ಕೇಳಿದರು: "ಏನಯ್ಯಾ,

ನೀನು ಸಾಧನೆ-ಭಜನೆ ಮಾಡಲು ಜಾಗವೊಂದನ್ನು ಮಾಡಿದ್ದೀಯಂತೆ. ನನಗವನ್ನು ತೋರಿಸಲೇ ಇಲ್ಲವಲ್ಲ?" ಇದನ್ನು ಕೇಳಿ ರಾಮಚಂದ್ರ ಅಧೀರನಾದ. "ಅಯ್ಯೋ, ಶ್ರೀರಾಮಕೃಷ್ಣರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಏನನ್ನು ತೋರಿಸಲಿ? ನಾನು ಬೆಳೆಯೋ ತರಕಾರಿಗಳನ್ನೇ?" ರಾಮಕೃಷ್ಣರ ಮಾತಿಗೆ ಎದುರು ನುಡಿಯದೆ ಡಿಸೆಂಬರ್ ೨೬, ೧೮೮೩ರ ಬುಧವಾರ ಮಧ್ಯಾಹ್ನ ಅವರನ್ನು ಆ ಜಾಗಕ್ಕೆ ಕರೆದುಕೊಂಡು ಹೋಗುವುದೆಂದು ನಿಶ್ಚಯಿಸಿ ಅವರಿಗೆ ತಿಳಿಸಿದ. ಹಿಂದಿನ ಮಂಗಳವಾರದಂದೇ ಸಂಜೆ ಒಬ್ಬನನ್ನು ಅಲ್ಲಿಗೆ ಕಳಿಸಿಕೊಟ್ಟ. ಕೊಳದ ಪೂರ್ವಕ್ಕೆ ಒಂದಿಷ್ಟು ಜಾಗವನ್ನು ಗುಡಿಸಿ ಪರಿಶುದ್ಧಗೊಳಿಸಿ ಮಧ್ಯದಲ್ಲಿ ದೊಡ್ಡದೊಂದು ತುಳಸಿಗಿಡವನ್ನು ನೆಡಲಾಯಿತು. ಅದರ ಸುತ್ತಲೂ ತುಳಸಿಯ ಸಸಿಗಳನ್ನು ನಾಲ್ಕೈದು ಕೈಗಳ ಅಂತರದಲ್ಲಿ ನೆಟ್ಟು, ಬೇಲಿ ಹಾಕಲಾಯಿತು. ಮಧ್ಯದ ಜಾಗವನ್ನು ಸಗಣಿಯಿಂದ ಸಾರಿಸಿ ಸ್ವಚ್ಛಗೊಳಿಸಲಾಯಿತು. ಈಗ ಆ ಜಾಗವನ್ನು ನೋಡಿದರೆ ಇಲ್ಲಿ ಸಾಧನೆ-ಭಜನೆಗಳು ನಡೆಯುವಂತೆ ತೋರುತ್ತಿತ್ತು.

ನಿರ್ದಿಷ್ಟ ದಿನದಂದು ಒಬ್ಬ ಭಕ್ತನನ್ನು ಜೊತೆಗೂಡಿಕೊಂಡು ಶ್ರೀರಾಮಕೃಷ್ಣರು ಸರಿಸುಮಾರು ನಾಲ್ಕುಗಂಟೆಗೆ ಗಾಡಿ ಮಾಡಿಕೊಂಡು ಅಲ್ಲಿಗೆ ಬಂದರು. ತೋಟ ನೋಡುತ್ತ ಉದ್ಗರಿಸಿದರು: "ಆಹಾ, ತೋಟ ಸುಂದರವಾಗಿದೆ. ಇದೇ ತರಹದ ತೋಟದಲ್ಲಿ ನಾನು ವಾಸಿಸುತ್ತಿದ್ದೇನೆಂದು ಒಮ್ಮೆ ನನಗೆ ಕಂಡಿತು." ಕೊಳವನ್ನು ನೋಡಿ ಆನಂದಿತರಾದರು. ಕೊಳದ ನೀರಿನಲ್ಲಿಳಿಯುತ್ತ ಕೈ-ಕಾಲುಗಳನ್ನು ತೊಳೆದುಕೊಂಡು, ಕೈಬೊಗಸೆಯಲ್ಲಿ ನೀರನ್ನೆತ್ತಿ ಕುಡಿಯುತ್ತ, "ಆಹಾ, ಕೊಳದ ನೀರು ಬಹಳ ಸಿಹಿಯಾಗಿದೆ" ಎಂದರು. ಕೊಳದ ದಕ್ಷಿಣ ದಿಕ್ಕಿಗೆ ಒಂದು ಸಣ್ಣ ಮನೆಯಿತ್ತು. ಅಲ್ಲಿ ಹೋಗಿ ಕುಳಿತುಕೊಂಡರು. ಮನೆಯ ಮಧ್ಯದಲ್ಲಿ ಅವರು ಕುಳಿತುಕೊಳ್ಳಲು ಆಸನವನ್ನು ಹರಡಿದ್ದರು. ಮನೆಯಲ್ಲಿ ಕುಳಿತುಕೊಂಡು ಭಕ್ತರೊಂದಿಗೆ ಭಗವತ್ ಸಲ್ಲಾಪವನ್ನು ಮಾಡಿದರು. (ನೋಡಿ ಶ್ರೀರಾಮಕೃಷ್ಣ ವಚನವೇದ ಭಾಗ-೧, ಪುಟ ೩೭೧-೭೨).

ರಾಮಚಂದ್ರ ನಿವೇದಿಸಿದ ಹಣ್ಣು ಮಿಠಾಯಿಗಳನ್ನು ಭಕ್ತರೊಂದಿಗೆ ಸೇವಿಸಿದರು. ನಂತರ ತೋಟದ ಉತ್ತರ ದಿಕ್ಕಿಗೆ ಹೋಗಿ ಒಂದು ಸ್ಥಳವನ್ನು ರಾಮಚಂದ್ರನಿಗೆ ತೋರಿಸಿ ಅಲ್ಲೊಂದು ಪಂಚವಟಿ ಮಾಡುವಂತೆ ಹೇಳಿದರು. ಶ್ರೀರಾಮಕೃಷ್ಣರು ಕಾಲಿಟ್ಟ ಆ ಮನೆಯೇ ಇಂದು ದುರಸ್ತಿಗೊಂಡು ನವೀನರೂಪವನ್ನು ತಳೆದಿದೆ. ಶ್ರೀರಾಮಕೃಷ್ಣರು ಕುಳಿತ ಜಾಗದಲ್ಲಿ ವೇದಿಕೆಯನ್ನು ನಿರ್ಮಿಸಲಾಗಿದೆ. ವೇದಿಯ ಹೊರಮೈಮೇಲೆ ಹೀಗೆ ಬರೆದಿದೆ : "ಇದೇ ಮನೆಯ ಇದೇ ಜಾಗದಲ್ಲಿ ಶ್ರೀರಾಮಕೃಷ್ಣರು ಭಕ್ತರೊಂದಿಗೆ ಕುಳಿತುಕೊಂಡಿದ್ದು, ಈ ಮನೆಯನ್ನು ದೇವರ ಕೋಣೆಯೆಂದು ಹೇಳಿ ಈ ಜಾಗಕ್ಕೆ 'ಯೋಗೋದ್ಯಾನ'ವೆಂದು ನಾಮಕರಣ ಮಾಡಿದರು (೨೬ ಡಿಸೆಂಬರ್ ೧೮೮೩)". ಶ್ರೀರಾಮಕೃಷ್ಣರು ತಮ್ಮ ಸ್ಪರ್ಶದಿಂದ ಪಾವನಗೈದ ಕೊಳವನ್ನು ರಾಮಚಂದ್ರನು 'ರಾಮಕೃಷ್ಣ ಕುಂಡ' ಎಂದು ಹೆಸರಿಸಿದನು.



ಶ್ರೀರಾಮಕೃಷ್ಣರು ಪಾವನಗೊಳಿಸಿದ ಕೊಳ

ಯೋಗೋದ್ಯಾನಕ್ಕೆ ಶ್ರೀರಾಮಕೃಷ್ಣರು ೧೮೮೫ರ ಒಂದು ಮಧ್ಯಾಹ್ನ ಮತ್ತೊಂದು ಭೇಟಿಕೊಟ್ಟಿದ್ದರು. ಅವರ ಗಂಟಲ ಬೇನೆ ಉಲ್ಬಣಗೊಳ್ಳುತ್ತಿದ್ದ ಸಮಯವದು. ಅವರೊಂದಿಗೆ ಕೆಲವು ಭಕ್ತರಿದ್ದರು. ಆ ದಿನ ಅವರ ಗಂಟಲ ಪರೀಕ್ಷೆಗೆ ರಾಮಚಂದ್ರನು ಡಾಕ್ಟರ್ ಕೈಲಾಸ್‌ಚಂದ್ರ ಬಸುವನ್ನು ಕರೆಸಿದ್ದನು.

## ಲೀಲೆಯಿಂದ ನಿತ್ಯಸ್ಥಾಯೀ

೧೮೮೬ರ ಆಗಸ್ಟ್ ೧೬ ರಂದು ಶ್ರೀರಾಮಕೃಷ್ಣರು ತಮ್ಮ ಐಹಿಕ ಲೀಲೆಯನ್ನು ಪರಿಸಮಾಪ್ತಿಗೊಳಿಸಿದರು. ಭಕ್ತಸಮುದಾಯದ ಆತ್ಮದ ಆತ್ಮವಾಗಿದ್ದ ಈ ಪಾವನ ಮೂರ್ತಿಯ, ಲೋಕಗುರುವಿನ ನೆನಪಿಗಾಗಿ ಸಮಾಧಿಮಂದಿರವೊಂದನ್ನು ಪ್ರತಿಷ್ಠಾಪಿಸಿಸಲು ರಾಮಚಂದ್ರದತ್ತ ಮತ್ತು ಪ್ರಮುಖರಾದ ಗೃಹೀಭಕ್ತರು ತೀರ್ಮಾನಿಸಿದರು. ಇದಕ್ಕೆ ಕಾಂಕುರ್‌ಗಾಛಿಯ 'ಯೋಗೋದ್ಯಾನ'ವೇ ಸೂಕ್ತ ಸ್ಥಳವೆಂದು ನಿರ್ಧರಿಸಿ, ತಮ್ಮ ನಿರ್ಧಾರವನ್ನು ನರೇಂದ್ರಾದಿ ಶ್ರೀರಾಮಕೃಷ್ಣರ ಯುವಶಿಷ್ಯರಿಗೆ ತಿಳಿಸಿದರು. ನರೇಂದ್ರನಾದರೋ ತನ್ನ ಸಮ್ಮತಿಯನ್ನೂ, ಸಹಕಾರವನ್ನೂ ಕೊಟ್ಟ. ಆದರೆ ಶಶಿ ಮತ್ತು ನಿರಂಜನರು ತಮ್ಮ ಗುರುದೇವರ ಪವಿತ್ರ ಚಿತಾಭಸ್ಮವನ್ನು ತಾವೆಲ್ಲ ಮುಂದೆ ಒಂದೆಡೆ ಸೇರಿ ಸ್ಥಾಪಿಸಲಿರುವ ಮಠದಲ್ಲಿ ಪ್ರತಿಷ್ಠಾಪಿಸಬೇಕೆಂದು ಪಟ್ಟುಹಿಡಿದರು. ಇದಕ್ಕಾಗಿ ಗೃಹೀಭಕ್ತರ ಗಮನಕ್ಕೆ ಬಾರದಂತೆ ಚಿತಾಭಸ್ಮದ ಬಹುಭಾಗವನ್ನು ಬೇರೊಂದು ತಾಮ್ರಕಲಶಕ್ಕೆ ವರ್ಗಾಯಿಸಿದರು.

ಗೃಹೀಭಕ್ತರು ರಾಮಚಂದ್ರದತ್ತನ ನೇತೃತ್ವದಲ್ಲಿ ೧೮೮೬ನೆ ಆಗಸ್ಟ್ ೨೩ರಂದು ಶ್ರೀರಾಮಕೃಷ್ಣರ ಪವಿತ್ರ ಚಿತಾಭಸ್ಮವನ್ನು ಯೋಗೋದ್ಯಾನದಲ್ಲಿ ಪ್ರತಿಷ್ಠಾಪಿಸಿದರು. ನರೇಂದ್ರನೇ ಅದನ್ನು ತನ್ನ ತಲೆಯ ಮೇಲಿಟ್ಟುಕೊಂಡು ಸಂಕೀರ್ತನೆಯೊಂದಿಗೆ ನಡೆದು ಬಂದು ಪ್ರತಿಷ್ಠಾಪಿಸಿದ. ಸಮಾಧಿಸ್ಥಾನಕ್ಕೆ ಯಾವುದೇ ಛಾವಣಿಯಿರಲಿಲ್ಲ. ಹೀಗಾಗಿ ಭೀಕರ ಮಳೆ-ಗಾಳಿಗಳಿಗೆ ಸಿಲುಕಿ ಪುಣ್ಯಕ್ಷೇತ್ರಕ್ಕೆ ಹಾನಿಯಾಗುತ್ತಿತ್ತು. ಒಮ್ಮೆ ರಾಮಚಂದ್ರನ ಚಿಕ್ಕಮ್ಮನ ಮಗನಾದ ಮನಮೋಹನ ಮಿತ್ರನಿಗೆ ಭವತಾರಿಣಿಯು ಕನಸಿನಲ್ಲಿ ಕಾಣಿಸಿಕೊಂಡು ಶ್ರೀರಾಮಕೃಷ್ಣರಿಗೆ ಬಹಳ ಕಷ್ಟವಾಗುತ್ತಿದೆ

ಎಂದಳು. ಈ ವಿಷಯವನ್ನು ಅವನು ರಾಮಚಂದ್ರನಿಗೆ ತಿಳಿಸಿದ. ಇದಕ್ಕೆ ಮೊದಲೇ ರಾಮಚಂದ್ರನ ಮಾವ(ತಾಯಿಯ ತಮ್ಮ)ನಿಗೆ ಇದೇ ರೀತಿಯ ಸ್ವಪ್ನವಾಗಿದ್ದು ರಾಮಚಂದ್ರನಿಗೆ ಅದನ್ನು ತಿಳಿಸಿದ್ದ. ಈಗ ರಾಮಚಂದ್ರನು ಸಮಾಧಿಸ್ಥಳಕ್ಕೆ ಒಂದು ಮೇಲ್ಹಾವಣಿಯನ್ನು ಹಾಕಲು ಯೋಚಿಸಿದ. ಆದರೆ ಅವನೀಗ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಬಿದ್ದಿದ್ದ. ಕೆಲವು ಭಕ್ತರು ಶ್ರೀರಾಮಕೃಷ್ಣರು ಗಂಗಾತೀರವನ್ನು ಇಷ್ಟಪಡುತ್ತಿದ್ದರಿಂದ, ಅವರ ಸಮಾಧಿಸ್ಥಳವನ್ನು ಗಂಗೆಯ ದಡದಲ್ಲೆಲ್ಲಾದರೂ ಮಾಡಬೇಕೆಂದು ಅಭಿಪ್ರಾಯಪಟ್ಟರು. ಹೀಗಿರುವಾಗಲೇ ಶ್ರೀರಾಮಕೃಷ್ಣರ ಗೃಹೀಭಕ್ತನಾದ ಈಶಾನಚಂದ್ರ ಮುಖ್ಯೋಪಾಧ್ಯಾಯನು ಒಂದು ಭಕ್ತಸಭೆಯನ್ನು ಏರ್ಪಡಿಸಿ, ಅದರಲ್ಲಿ ಸರ್ವರ ಸಮ್ಮತಿಯನ್ನು ಪಡೆದುಕೊಂಡು ಸಮಾಧಿಸ್ಥಳವನ್ನು ಬೇರೆಡೆ ವರ್ಗಾಯಿಸುವುದು ಬೇಡವೆಂದು ತೀರ್ಮಾನಿಸಿದನು.

### ಶೈಶವದಿಂದ ಚಿರ ಯೌವ್ವನದೆಡೆಗೆ

೧೮೮೬ರ ಕಾಳೀಪೂಜೆಗೆ ಮೊದಲೇ ಭಕ್ತ ಮನಮೋಹನನ ಏಕನಿಷ್ಠ ಪ್ರಯಾಸದಿಂದ ಸಮಾಧಿಮಂದಿರ ನಿರ್ಮಾಣಗೊಂಡಿತು. ಕಾಳೀಪೂಜೆಯ ದಿನದಂದು ಆ ಮಂದಿರವನ್ನು ಉದ್ಘಾಟಿಸಲಾಯಿತು. ಯೋಗೋದ್ಯಾನಕ್ಕೆ, ಮೊದಲು "ಶ್ರೀರಾಮಕೃಷ್ಣ ಸಮಾಧಿ-ಮಹಾಪೀಠ ಶ್ರೀಯೋಗೋದ್ಯಾನ" ಎಂದು ಹೆಸರಿತ್ತು. ಮೊದಲು ಶ್ರೀರಾಮಕೃಷ್ಣರ ಭಕ್ತನಾದ ನಿತ್ಯಗೋಪಾಲನೇ ಪೂಜಾದಿಗಳನ್ನು ನೋಡಿಕೊಳ್ಳುತ್ತಿದ್ದ. ಆತ ಐದಾರು ತಿಂಗಳುಗಳಲ್ಲೇ ಕಾಯಿಲೆ ಬಿದ್ದುದರಿಂದ ಅವನ ಕೆಲಸವನ್ನು ಒಬ್ಬ ಬ್ರಾಹ್ಮಣನಿಗೆ ವಹಿಸಲಾಯಿತು. ಆ ಬ್ರಾಹ್ಮಣ ಕೆಲಸವನ್ನು ಶ್ರದ್ಧೆಯಿಂದ ಮಾಡದೆ ಆಗಾಗ ಪೂಜಾದಿಗಳಲ್ಲಿ ಲೋಪದೋಷಗಳನ್ನು ಮಾಡುತ್ತಿದ್ದ. ಇದನ್ನು ಗಮನಿಸಿದ ರಾಮಚಂದ್ರ ತನ್ನ ಸ್ವಂತ ಮನೆಯನ್ನು ಬಿಟ್ಟು ಯೋಗೋದ್ಯಾನದಲ್ಲೇ ವಾಸಿಸತೊಡಗಿದ. ಮನಮೋಹನ ಮಿತ್ರನೂ ಪ್ರತಿದಿನವೆಂಬಂತೆ ಅಲ್ಲಿಗೆ ಬಂದು ಹೋಗುತ್ತಿದ್ದ. ನಿಧಾನವಾಗಿ ರಾಮಚಂದ್ರನ ಏಕನಿಷ್ಠ ಭಕ್ತಿ, ತ್ಯಾಗಗಳನ್ನು ನೋಡಿ ಭಕ್ತರು ಯೋಗೋದ್ಯಾನದೆಡೆಗೆ ಬರತೊಡಗಿದರು.

ರಾಮಚಂದ್ರನ ನಿಧನಾನಂತರ ಆತನ ಹೆಂಡತಿ ಯೋಗೋದ್ಯಾನದ ಆಸ್ತಿಯ ಸಂಬಂಧವಾಗಿ ನ್ಯಾಯಾಲಯದಲ್ಲಿ ದಾವೆ ಹೂಡಲು, ಆಸ್ತಿಯು ಸೇವಕ ಹಾಗೂ ಭಕ್ತ ಮಂಡಲಿಗೆ ಸೇರಬೇಕೆಂದು ತೀರ್ಮಾನವಾಯಿತು. ೧೯೦೧ರಲ್ಲಿ ಯೋಗೋದ್ಯಾನ ಮಂದಿರಕ್ಕೆ ತಾಕಿಕೊಂಡೇ ಇಟ್ಟಿಗೆಯಿಂದ ನಿರ್ಮಿಸಿದ ಪ್ರಾರ್ಥನಾ ಮಂದಿರವೊಂದು ಅಸ್ತಿತ್ವಕ್ಕೆ ಬಂತು. ಶ್ರೀಮಾತೆ ಶಾರದಾದೇವಿಯವರು ಈ ಪ್ರಾರ್ಥನಾಮಂದಿರವನ್ನು ಉದ್ಘಾಟಿಸಿದರು. ಅಂದು ಅವರೇ ವೇದಿಯ ಎದುರು ಕುಳಿತು ಶ್ರೀರಾಮಕೃಷ್ಣರನ್ನು ಅರ್ಚಿಸಿದರು. ಸಾಯಂಕಾಲ ಭಕ್ತರಿಗೆ ದರ್ಶನವಿತ್ತು, ಉದ್ಬೋಧನಕ್ಕೆ ತೆರಳಿದರು. ಶ್ರೀಮಾತೆಯವರೇ ಅಲ್ಲದೆ ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರಾದ ಸ್ವಾಮಿ ಶಿವಾನಂದ, ಸ್ವಾಮಿ ಅದ್ಭುತಾನಂದ, ಸ್ವಾಮಿ ವಿವೇಕಾನಂದರು ಯೋಗೋದ್ಯಾನಕ್ಕೆ ಭೇಟಿಯಿತ್ತರು.

ರಾಮಚಂದ್ರದತ್ತನ ಅನಂತರ ಯೋಗೋದ್ಯಾನದ ಮೇಲ್ವಿಚಾರಣೆ ಆತನ ಸಂನ್ಯಾಸೀ ಶಿಷ್ಯನಾದ ಯೋಗವಿನೋದ ಮಹಾರಾಜರ ಪಾಲಿಗೆ ಬಂತು. ಅನಂತರ ಅವರ ಶಿಷ್ಯರಾದ ಸ್ವಾಮಿ ಯೋಗವಿಮಲ ಮಹಾರಾಜರು ಮಠದ ಮೇಲ್ವಿಚಾರಕರಾದರು. ೧೯೪೩ನೇ ಏಪ್ರಿಲ್ ತಿಂಗಳಿನಲ್ಲಿ 'ಯೋಗೋದ್ಯಾನ'ದ ಹಕ್ಕುಪತ್ರಗಳನ್ನು ರಾಮಕೃಷ್ಣ ಮಠ ಹಾಗೂ ಮಿಷನ್‌ಗೆ ಯೋಗೋದ್ಯಾನದ ಆಗಿನ ಮೇಲ್ವಿಚಾರಕರು ಒಪ್ಪಿಸಿದರು. ಇದಾದ ನಂತರ ಯೋಗೋದ್ಯಾನಕ್ಕೆ ಅಕ್ಕಪಕ್ಕದ ಸ್ವಲ್ಪ ಜಮೀನನ್ನು ಖರೀದಿಸಿ ಸೇರಿಸಿ ಅದರ ವಿಸ್ತೀರ್ಣವನ್ನು ಎರಡು ಎಕರೆಗಳಿಗೆ ಹೆಚ್ಚಿಸಲಾಯಿತು. "ಶ್ರೀರಾಮಕೃಷ್ಣ ಸಮಾಧಿ-ಮಹಾಪೀಠ ಶ್ರೀಯೋಗೋದ್ಯಾನ"ವೆಂದಿದ್ದ ಹೆಸರನ್ನು "ರಾಮಕೃಷ್ಣ ಯೋಗೋದ್ಯಾನ"ವೆಂದು ೧೯೪೩ರಲ್ಲಿ ಬದಲಾಯಿಸಲಾಯಿತು. ಈಗ "ರಾಮಕೃಷ್ಣ ಮಠ - ಯೋಗೋದ್ಯಾನ"ವೆಂದು ಬದಲಾಯಿಸಲಾಗಿದೆ.

೧೯೬೭, ಜನವರಿ ೨೬ರಂದು ಮಂದಿರದಲ್ಲಿ ಶ್ರೀರಾಮಕೃಷ್ಣರ ಸುಂದರ ಅಮೃತಶಿಲೆಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ರಾಮಕೃಷ್ಣ ಮಹಾಸಂಘದ ಹತ್ತನೆಯ ಅಧ್ಯಕ್ಷರಾದ ಪೂಜ್ಯಪಾದ ಸ್ವಾಮಿ ಭೂತೇಶಾನಂದಜೀಯವರು ಯೋಗೋದ್ಯಾನದ ಅಧ್ಯಕ್ಷರಾಗಿ ನೇಮಕಗೊಂಡಾಗ ಗರ್ಭಮಂದಿರದ ಹಾಗೂ ಪ್ರಾರ್ಥನಾ ಮಂದಿರದ ದುರಸ್ತಿ ಕಾರ್ಯಗಳು ನಡೆದವು. ಇದೀಗ ಯೋಗೋದ್ಯಾನವು ೧೨೧ ವರ್ಷಗಳ ಸುದೀರ್ಘ ಇತಿಹಾಸದ ಹಾದಿಯನ್ನು ತುಳಿದಿದೆ.

ಮಠವು ಭಗವಾನ್ ಶ್ರೀರಾಮಕೃಷ್ಣರ, ಶಾರದಾದೇವಿಯವರ, ಸ್ವಾಮಿ ವಿವೇಕಾನಂದರ ಜಯಂತ್ಯುತ್ಸವಗಳನ್ನು ಆಚರಿಸುತ್ತದೆ. ಇದಲ್ಲದೆ ಕಾಳೀಪೂಜೆ, ಶಿವರಾತ್ರಿ, ನಿತ್ಯಾವಿರ್ಭಾವ (ಶ್ರೀರಾಮಕೃಷ್ಣರ ಪವಿತ್ರ ಚಿತಾಭಸ್ಮವನ್ನು ಪ್ರತಿಷ್ಠಾಪಿಸಿದ ದಿನ) ಹಾಗೂ ಕಲ್ಪತರು ದಿವಸಗಳಂದು ವಿಶೇಷ ಕಾರ್ಯಕ್ರಮಗಳನ್ನು ನಡೆಸುತ್ತದೆ. ನೆರೆಯ ಕೊಳಚೆ ನಿವಾಸಿ ಬಡ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸವನ್ನು ನೀಡುವ ಸಲುವಾಗಿ ಮಠದ ಸಾಧು ಸ್ವಯಂಸೇವಕರು "ವಿವೇಕಾನಂದ ಬಾಲಕ ಸಂಘ"ವನ್ನು ನಡೆಸುತ್ತಿದ್ದಾರೆ.

ಪ್ರಸ್ತುತ ವಿಸ್ತರಿಸುತ್ತಿರುವ ಜನಸಂಖ್ಯೆಯು ಕೊಲ್ಕತಾದಂತಹ ಮಹಾನಗರದಲ್ಲಿ ಪ್ರಶಾಂತತೆಗೆ ಸ್ಥಳವಿಲ್ಲದಂತೆ ಮಾಡಿದೆ. ಒಂದು ಬೇಕಾದರೆ ಮತ್ತೊಂದನ್ನು ತ್ಯಜಿಸಬೇಕಲ್ಲವೇ? ಆದರೆ ಶಾಂತಿಯಿಲ್ಲದ ಬದುಕು ಅಸಹನೀಯವೇ ಸರಿ. ಇದೀಗ ಯೋಗೋದ್ಯಾನದ ಸುತ್ತಮುತ್ತಲೂ ಜನಸಂದಣಿ ಹೆಚ್ಚಿದ್ದು ಆಶ್ರಮದ ಶಾಂತ ವಾತಾವರಣಕ್ಕೆ ಧಕ್ಕೆ ಬಂದಿದೆ. ಹೀಗಾಗಿ ದಣಿದ, ಬೆಂದ ಮನಗಳಿಗೆ ಶಾಂತಿಸುಧೆಯನ್ನು ನೀಡಲು ಯೋಗೋದ್ಯಾನ ಮಠವು ಪಕ್ಕದಲ್ಲಿರುವ ೪.೩೬ ಎಕರೆ ಜಾಗವನ್ನು ಖರೀದಿಸಲು ನಿರ್ಧರಿಸಿದೆ. ಆದರೆ ಇದಕ್ಕೆ ಸುಮಾರು ೧೦ ಕೋಟಿ ರೂಪಾಯಿಗಳ ಅಗತ್ಯವಿದ್ದು, ಮಠವು ಭಕ್ತವೃಂದಕ್ಕೆ, ಓತ್ಸೈಪಿಗಳಿಗೆ, ಮಠದ ಶಾಂತ ಹಾಗೂ ಪವಿತ್ರ ವಾತಾವರಣವನ್ನು ಕಾಪಾಡಲು ಬಯಸುವ ಆಸಕ್ತರಿಗೆ ಮನವಿ ಸಲ್ಲಿಸುತ್ತಿದೆ.